## ಪ್ರಧಾನ ನ್ಯಾಯಿಕ ದಂಡಾಧಿಕಾರಿ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಮಾಗಡಿ

## ಕ್ರಿಮಿನಲ್ ಪ್ರಕರಣ ಸಂಖ್ಯೆ : 149 / 2015

ಸಿ.ಡಬ್ಲ್ಯೂ :- 01 / ಪಿ.ಡಬ್ಲ್ಯೂ :- 01

| | |
|---|---|
| ಹೆಸರು | **ಎ ಗಂಗರಂಗಯ್ಯ** |
| ತಂದೆ ಹೆಸರು | **ಲೇಟ್ ಅಂಕಯ್ಯ** |
| ವಯಸ್ಸು | **70 ವರ್ಷ** |
| ವೃತ್ತಿ | **ನಿವೃತ ಎ.ಎಸ್.ಐ.** |
| ವಾಸಸ್ಥಳ | **ರಾಮನಗರ** |

**ದಿನಾಂಕಃ 23-07-2026** ರಂದು ಸಾಕ್ಷಿಗೆ ಕ್ರಮಬದ್ದವಾಗಿ ಪ್ರಮಾಣವಚನವನ್ನು ಬೋಧಿಸಲಾಯಿತು.

**ಮುಖ್ಯ ವಿಚಾರಣೆ :- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ :- 299 ಭಾರತೀಯ ದಂಡ ಪ್ರಕ್ರಿಯೆ ಸಂಹಿತೆ ಅಡಿಯಲ್ಲಿ ಸಾಕ್ಷವನ್ನು ದಾಖಲಿಸಿಕೊಂಡಿರುತ್ತೇವೆ.**

ನಾನು ಡಿಸೆಂಬರ್-2013 ರಿಂದ ಮೇ-2017 ರವರೆಗೆ ಮಾಗಡಿ ಪೋಲಿಸ್ ಠಾಣೆಯಲ್ಲಿ ಎ.ಎಸ್.ಐ. ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕಃ 11-07-2014 ರಂದು ನಾನು ಮಾಗಡಿ ಟೌನ್ ಗಸ್ತು ಕರ್ತವ್ಯವನ್ನು ಮುಗಿಸಿ ಬೆಳಗಿನ ಜಾವ 3 ಗಂಟೆಯ ಸುಮಾರಿಗೆ ಹೊಸಪೇಟೆ ಸರ್ಕಲ್ ನ ಚೆಕ್ ಪೋಸ್ಟ ನ ಬಳಿ ಸಿಬ್ಬಂದಿಗಳನ್ನು ಚೆಕ್ ಮಾಡಲು ಹೋದಾಗ, ಕುಣಿಗಲ್ ಕಡೆಯಿಂದ ಟಾಟಾ ಸುಮೋ ನೊಂದಣಿ ಸಂಖ್ಯೆ-ಕೆಎ-05-ಬಿ-7301 ನ್ನು ನಿಲ್ಲಿಸಿ ಪರಿಶೀಲನೆ ಮಾಡಲು ಹೋದಾಗ ಅದರಿಂದ ಸುಮಾರು 5-6 ಜನರು ಇಳಿದು ನಮ್ಮನ್ನು ನೋಡಿ ಓಡಿ ಹೋಗಲು ಪ್ರಯತ್ನಿಸಿರುತ್ತಾರೆ. ಅವರಲ್ಲಿ ನಾವು 1 ಮತ್ತು 2ನೇ ಆರೋಪಿತರನ್ನು ಹಿಡಿದು ಅವರ ಹೆಸರು ಮತ್ತು ವಿಳಾಸ ಕೇಳಿದ್ದು, ಅವರ ಹೆಸರು ಮತ್ತು ವಿಳಾಸವನ್ನು ತಿಳಿಸಿರುತ್ತಾರೆ. ಓಡಿ ಹೋದವರ ಹೆಸರು ಮತ್ತು ವಿಳಾಸ ವಿಚಾರಿಸಿದಾಗ ಅವರು 3 ರಿಂದ 5ನೇ ಆರೋಪಿತರ ಹೆಸರು ಮತ್ತು ವಿಳಾಸ ತಿಳಿಸಿರುತ್ತಾರೆ. ನಂತರ ಮುಂದುವರೆದು ವಿಚಾರಣೆ ಮಾಡಿದಾಗ 1 ರಿಂದ 5ನೇ ಆರೋಪಿತರು ಹೋಗಿ ತಿಪ್ಪಸಂದ್ರ ಹೋಬಳಿಯ ದೊಡ್ಡಮುದಿಗೆರೆ ಗ್ರಾಮದ ಜಮೀನಿನಲ್ಲಿ ಶ್ರೀಗಂಧದ ಮರವನ್ನು ಕಳ್ಳತನದಿಂದ ಕಡೆದು ಅದರ ಚೆಕ್ಕೆಯನ್ನು ತೆಗೆದುಕೊಂಡು ಉಳಿದ ಮರದ ಅಲ್ಲಿಯೇ ಬಿಟ್ಟಿರುವುದಾಗಿ ತಿಳಿಸಿರುತ್ತಾರೆ. ಸದರಿ ವಾಹನವನ್ನು ಪರಿಶೀಲಿಸಿದಾಗ ಅದರಲ್ಲಿ ಒಂದು ಬ್ಯಾಗ್, ಸದರಿ ಬ್ಯಾಗಿನಲ್ಲಿ ಮರವನ್ನು ತುಂಡು ಮಾಡುವ ಒಂದು ಗರಗಸ, ಹಗ್ಗ, 2 ಶ್ರೀಗಂಧದ ತುಂಡುಗಳು ಇರುವುದು ಕಂಡು ಬಂದಿದ್ದು, ಅವುಗಳನ್ನು ವಶಪಡಿಸಿಕೊಂಡು 1 ಮತ್ತು 2ನೇ ಆರೋಪಿತರೊಂದಿಗೆ ಠಾಣಾ ಪ್ರಭಾರ ಅಧಿಕಾರಿಗಳ ಮುಂದೆ ಬೆಳಿಗ್ಗೆ 4.30 ರ ಸುಮಾರಿಗೆ ಹಾಜರು ಪಡಿಸಿರುತ್ತೇನೆ.

ದಿನಾಂಕಃ 12-07-2014 ರಂದು ಠಾಣಾಧಿಕಾರಿ ಮಾಡಿದ ಅಮಾನತು ಪಂಚನಾಮೆಗೆ ನಾನು ಸಹಿ ಮಾಡಿರುತ್ತೇನೆ. ಕಡತದಲ್ಲಿ ಅಮಾನತು ಪಂಚನಾಮೆ ನಕಲು ಪ್ರತಿ ಇದ್ದ ಕಾರಣದಿಂದ ಸದರಿ ಅಮಾನತು ಪಂಚನಾಮೆಯನ್ನು ಗುರುತಿಸುವಿಕೆಯಿಂದ ಕೈ ಬಿಡಲಾಯಿತು. ಆರೋಪಿತರನ್ನು ಹಾಗೂ ವಶಪಡಿಸಿಕೊಂಡ ಮಾಲುಗಳನ್ನು ನೋಡಿದರೆ ಗುರುತಿಸುತ್ತೇನೆ.

**ಮರು ವಿಚಾರಣೆ :- ಇರುವುದಿಲ್ಲ.**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು )

ಓ. ಹೇ. ಕೇ. ಸ. ಎಂ. ಒ.                                        ನನ್ನ ಸಮಕ್ಷಮ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಲಯ, ಮಾಗಡಿ.

## ಪ್ರಧಾನ ನ್ಯಾಯಿಕ ದಂಡಾಧಿಕಾರಿ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಮಾಗಡಿ

## ಕ್ರಿಮಿನಲ್ ಪ್ರಕರಣ ಸಂಖ್ಯೆ : 149 / 2015

ಪಿ.ಡಬ್ಲೂ :- 02

| | |
|---|---|
| ಹೆಸರು | **ಕೋದಂಡರಾಮಯ್ಯ** |
| ತಂದೆ ಹೆಸರು | **ಲೇಟ್ ಕೃಷ್ಣಪ್ಪ** |
| ವಯಸ್ಸು | **67 ವರ್ಷ** |
| ವೃತ್ತಿ | **ನಿವೃತ ಎ.ಎಸ್.ಐ.** |
| ವಾಸಸ್ಥಳ | **ಬೆಂಗಳೂರು** |

**ದಿನಾಂಕಃ 23-07-2026** ರಂದು ಸಾಕ್ಷಿಗೆ ಕ್ರಮಬದ್ದವಾಗಿ ಪ್ರಮಾಣವಚನವನ್ನು ಬೋಧಿಸಲಾಯಿತು.

**ಮುಖ್ಯ ವಿಚಾರಣೆ :- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ :- 299 ಭಾರತೀಯ ದಂಡ ಪ್ರಕ್ರಿಯೆ ಸಂಹಿತೆ ಅಡಿಯಲ್ಲಿ ಸಾಕ್ಷವನ್ನು ದಾಖಲಿಸಿಕೊಂಡಿರುತ್ತೇವೆ.**

ನಾನು ಜನವರಿ-2018 ರಿಂದ ಮೇ-2019 ರವರೆಗೆ ಮಾಗಡಿ ಪೋಲಿಸ್ ಠಾಣೆಯಲ್ಲಿ ಎ.ಎಸ್.ಐ. ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕಃ 17-04-2018 ರಂದು ಈ ಪ್ರಕರಣದಲ್ಲಿ ನ್ಯಾಯಾಲಯದಿಂದ ಪ್ರೊಕ್ಲಮೇಷನ್ ವಾರೆಂಟ ಜಾರಿ ಮಾಡಿದ್ದು, ಅದನ್ನು ಅಮಲುಜಾರಿ ಮಾಡಲು ನನ್ನನ್ನು ನೇಮಕ ಮಾಡಿದ್ದು, ದಿಃ 17-04-2018 ರಂದು ರಾಮನಗರ ಟೌನ್, ಜಾಲಮಂಗಲ ರಸ್ತೆ, ಹನುಮಂತಪುರದ ವೆಂಕಟೇಶ್ವರ ದೇವಸ್ಥಾನದ ಬಳಿ ಹೋಗಿ ಗ್ರಾಮದ ಜನರನ್ನು ವಿಚಾರಿಸಲಾಗಿ, ಆರೋಪಿ ಯಾರು ಎಂದು ಗೊತ್ತಿರುವುದಿಲ್ಲ ಹಾಗೂ ಆತ ಸುಳ್ಳು ವಿಳಾಸ ನೀಡಿರುತ್ತಾರೆಂದು ನಮಗೆ ತಿಳಿಸಿರುತ್ತಾರೆ. ನಂತರ ಸದರಿ ದೇವಸ್ಥಾನದ ಬಳಿ ಟಾಂ ಟಾಂ ಹೊಡಿಸಿ, ಇಬ್ಬರು ಪಂಚರನ್ನು ಬರಮಾಡಿಕೊಂಡು ಆರೋಪಿಯ ಇರುವಿಕೆಯ ಬಗ್ಗೆ ತಿಳಿದ್ದಲ್ಲಿ ಪೋಲಿಸ್ ಠಾಣೆಗೆ ಮಾಹಿತಿ ನೀಡಬೇಕೆಂದು ಡಂಗೂರ ಬಾರಿಸಿ, ದೇವಸ್ಥಾನದ ಗೊಡೆಯ ಮೇಲೆ ಪ್ರೊಕ್ಲಮೇಷನ್ ವಾರೆಂಟ ನಕಲು ಪ್ರತಿ ಅಂಟಿಸಿ ಪಂಚನಾಮೆಯನ್ನು ಮಧ್ಯಾಹ್ನ 1 ರಿಂದ 1.45 ಗಂಟೆವರೆಗೆ ಮಾಡಿರುತ್ತೇನೆ. ಸದರಿ ಪಂಚನಾಮೆಯಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಪಂಚನಾಮೆಯನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ದಿನಾಂಕಃ 18-04-2018 ರಂದು ಈ ಪ್ರಕರಣದಲ್ಲಿ ನ್ಯಾಯಾಲಯದಿಂದ 7ನೇ ಆರೋಪಿಯ ಪ್ರೊಕ್ಲಮೇಷನ್ ವಾರೆಂಟ ಜಾರಿ ಮಾಡಿದ್ದು, ಅದನ್ನು ಅಮಲುಜಾರಿ ಮಾಡಲು ನನ್ನನ್ನು ನೇಮಕ ಮಾಡಿದ್ದು, ದಿಃ 18-04-2018 ರಂದು ರಾಮನಗರ ಟೌನ್, ಕೆಂಪೇಗೌಡನಗ ಜಾಲಮಂಗಲ ರಸ್ತೆ, ಓಡಿಪುರಕ್ಕೆ ಹೋಗಿ ಗ್ರಾಮದ ಜನರನ್ನು ವಿಚಾರಿಸಲಾಗಿ, 7ನೇಆರೋಪಿ ಯಾರು ಎಂದು ಗೊತ್ತಿರುವುದಿಲ್ಲ ಹಾಗೂ ಆತ ಸುಳ್ಳು ವಿಳಾಸ ನೀಡಿರುತ್ತಾರೆಂದು ನಮಗೆ ತಿಳಿಸಿರುತ್ತಾರೆ.

ನಂತರ ಸದರಿ ಶನಿಮಹಾತ್ಮ ದೇವಸ್ಥಾನದ ಬಳಿ ಟಾಂ ಟಾಂ ಹೊಡಿಸಿ, ಇಬ್ಬರು ಪಂಚರನ್ನು ಬರಮಾಡಿಕೊಂಡು ಆರೋಪಿಯ ಇರುವಿಕೆಯ ಬಗ್ಗೆ ತಿಳಿದ್ದಲ್ಲಿ ಪೋಲಿಸ್ ಠಾಣೆಗೆ ಮಾಹಿತಿ ನೀಡಬೇಕೆಂದು ಡಂಗೂರ ಬಾರಿಸಿ, ದೇವಸ್ಥಾನದ ಗೊಡೆಯ ಮೇಲೆ ಪ್ರೋಕ್ಲಮೇಷನ್ ವಾರೆಂಟ ನಕಲು ಪ್ರತಿ ಅಂಟಿಸಿ ಪಂಚನಾಮೆಯನ್ನು ಬೆಳಿಗ್ಗೆ 11 ರಿಂದ 11.45 ಗಂಟೆವರೆಗೆ ಮಾಡಿರುತ್ತೇನೆ. ಸದರಿ ಪಂಚನಾಮೆಯಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಪಂಚನಾಮೆಯನ್ನು ನಿಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು.

ನಂತರ ಈ ಮೇಲೆ ಹೇಳಿದ ಆರೋಪಿತರುಗಳ ಹೆಸರಿಲ್ಲಿರುವಂತಹ ಆಸ್ತಿಗಳ ಬಗ್ಗೆ ವಿವರವನ್ನು ಕೋರಿ ರಾಮನಗರ ಪುರಸಭೆಗೆ ಕೋರಿ ಎರಡು ಮನವಿ ನೀಡಿರುತ್ತೇನೆ. ಸದರಿ ಪುರಸಭೆ ಅಧಿಕಾರಿಗಳು ಆರೋಪಿತರ ಹೆಸರಿನಲ್ಲಿ ಯಾವುದೇ ಆಸ್ತಿಗಳು ಇಲ್ಲವೆಂದು ನಮಗೆ ವರದಿ ನೀಡಿರುತ್ತಾರೆ. ಸದರಿ ಮನವಿಯಲ್ಲಿ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿ ಮನವಿಗಳನ್ನು ನಿಪಿ-3 ಮತ್ತು 4 ಎಂದು, ಸಾಕ್ಷಿಯ ಸಹಿಯನ್ನು ನಿಪಿ-3(ಎ) ಮತ್ತು 4(ಎ) ಎಂದು ಗುರುತಿಸಲಾಯಿತು.

**ಮರು ವಿಚಾರಣೆ :- ಇರುವುದಿಲ್ಲ.**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು )

ಓ. ಹೇ. ಕೇ. ಸ. ಎಂ. ಒ.　　　　　　　　ನನ್ನ ಸಮಕ್ಷಮ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಲಯ, ಮಾಗಡಿ.